ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈಗ ಮಾನ್ಯ ಸದಸ್ಯರು ಕುರಣಿ ಮತ್ತು ಕೋಚರಿ ಡಿಸ್ಟ್ರಿಬ್ಯೂಟರಿ ಬಗ್ಗೆ ಹೇಳಿದ್ದಾರೆ. ಆ ಕಾಲುವೆಗೆ ಸುಮಾರು ೩ ಕೋಟಿ ರೂಪಾಯಿ ಅಷ್ಟು ಅಂದಾಜು ಆಗಬಹುದು. ಸುಮಾರು ೪.೦೯ ಲಕ್ಷ ಡಿಸ್ಟ್ರಿಬ್ಯೂಟರಿಗೆ ಖರ್ಚು ಮಾಡಿದ್ದೇವೆ. ಕೋಚರಿ ಕೆಲಸ ಇನ್ನೂ ಪ್ರಾರಂಭ ಮಾಡಿಲ್ಲ, ಕರಣಿ ಡಿಸ್ಟ್ರಿಬ್ಯೂಟರಿ ಕೆಲಸ ಕೆಲಸ ಪ್ರಾರಂಭ ಮಾಡಿದ್ದೇವೆ. ಪ್ರಾರಂಭ ಮಾಡಿದ್ದೇವೆ. ಆದಷ್ಟು ಬೇಗ ಕೋಚರಿ ಕೆಲಸವೂ ಪ್ರಾರಂಭವಾಗಿ ಡಿಸ್ಟ್ರಿಬ್ಯೂಟರಿ ಕೆಲಸವನ್ನು ಆದಷ್ಟು ಬೇಗ ಮುಗಿಸುತ್ತೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—೩ ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿರುತ್ತಿದ್ದೀರಿ. ಆದನ್ನು ತೀವ್ರವಾಗಿ ತೆಗೆದುಕೊಂಡು ಪೂರ್ತಿಯಾಗಿ ಹಣವನ್ನು ಒದಗಿಸಿದರೆ ಕೆಲಸ ಮುಗಿದರೆ ನೀರನ್ನು ಉಪಯೋಗಿಸಬಹುದು. ಅಲ್ಲಿನ ಪರಿಸ್ಥಿತಿ ತಮಗೆ ಗೊತ್ತಿದೆ. ಇದನ್ನು ತೀವ್ರವಾಗಿ ಇದೇ ವರ್ಷದಲ್ಲಿ ಪ್ರಾರಂಭ ಮಾಡಿದರೆ ೨೫ ಸಾವಿರ ಎಕರೆಗೆ ನೀರಾವರಿ ಆಗಬಹುದು, ಅಲ್ಲಿ ಶುಗರ್‌ಕೇನ್ ಏರಿಯಾ ಬರುತ್ತದೆ, ಜನರಿಗೆ ಅನುಕೂಲ ಆಗುತ್ತದೆ. ಆದುದರಿಂದ ದಯಮಾಡಿ ಈ ಕಾರ್ಯಕ್ರಮವನ್ನು ಲಘು ತೆಗೆದುಕೊಳ್ಳಬೇಕು. ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಿ ಚಿಮ್ಮನಕಟ್ಟಿ.—ಹಾಗೆ ಮಾಡಲಿಕ್ಕೆ ಆಗುವುದಿಲ್ಲ ಬಲದಂಡೆ ಕಾಲುವೆ ೩೮ ಕಿಲೊ ಮೀಟರ್ ಆಗುತ್ತದೆ. ಕೆಲಸ ಪ್ರಾರಂಭ ಮಾಡಿದ್ದೇವೆ. ಚಿಕ್ಕೋಡಿ ಬ್ರಾಂಚ್‌ನಲ್ಲಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ ಅಲ್ಲಿ ಕೆಲಸಗಾರರಿಗೆ ದುಡ್ಡನ್ನು ಒದಗಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಡಿಸ್ಟ್ರಿಬ್ಯೂಟರಿಗೆ ಪ್ರಿಯಾರಿಟಿ ಕೊಡಬೇಕು ಎಂದು ಹೇಳಿದ್ದಾರೆ, ಅದನ್ನು ಪರಿಶೀಲಿಸಿ ತೆಗೆದುಕೊಳ್ಳುವುದಕ್ಕೆ ನಾನು ತಿಳಿಸುತ್ತಾ ಇದ್ದೇನೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಪರಿಶೀಲನೆ ಮಾಡುವುದು ಬೇಡ. ೪ ಕೋಟಿ ರೂಪಾಯಿಗಳಿಗೆ ೪ ಲಕ್ಷ ಖರ್ಚು ಮಾಡಿದರೆ ಅದರ ಕಾರ್ಯ ಹೇಗೆ ಮುಗಿಯುತ್ತದೆ. ದಯಮಾಡಿ ಬಲದಂಡೆಯ ಕುರಣಿ ಮತ್ತು ಕೋಚರಿ ಡಿಸ್ಟ್ರಿಬ್ಯೂಟರಿಯಿಂದ ೧೦ ಸಾವಿರ ಎಕರೆ ನೀರಾವರಿಯಾಗುವಂಥ ಕಾರ್ಯಕ್ರಮ ತೆಗೆದುಕೊಂಡರೆ ಜನರಿಗೆ ಅನುಕೂಲವಾಗುತ್ತದೆ. ಇದನ್ನು ತೀವ್ರವಾಗಿ ತೆಗೆದುಕೊಳ್ಳಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಬಿ, ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ .....

ಅಧ್ಯಕ್ಷರು.—೪ ಕೋಟಿ ಅಂದಾಜಿಗೆ ೪ ಲಕ್ಷ ಹಣ ಕೊಟ್ಟರೆ ತುಂಬಾ ದಿವಸ ಆಗುತ್ತದೆ, ಆದರಿಂದ ಪ್ರಯೋಜನ ಬರುವುದಿಲ್ಲ, ಹೆಚ್ಚು ಹಣ ಒದಗಿಸುತ್ತೀರಾ ಎಂದು ಕೇಳುತ್ತಿದ್ದಾರೆ.

SRI B. B. CHIMMANAKATTI.—Due to lack of funds, and has not been possible.

MR. SPEAKER.—Question hour is over.

QUESTIONS FOR ANSWERS ON THE DAY
(But not taken up)

Recruitment of staff to Taluk Development Board, Raibhag

27 SRI R. S. NADONI (Raibhag).—Will the Minister for Rural Development and Panchyat Raj be pleased to state.—

(a) the number of various categories of posts sanctioned to the Block Development Office, Raibhag Taluk ;

(b) if so, out of the various categories of posts, the number of employees working there ;

(c) whether it has come to the notice of the Government that some posts are fallen vacant if so, the action taken by the Government to fill up these vacant posts ;

(d) whether Government is aware, if the vacant post are not filled up, the development works this Taluk will be held up ;

SRI B. RAMAIAH (Minister for Rural Development and Panchayat Raj).—

(a) and (b) Detailed Statement laid on the Table.

(c) Yes, Instructions has been given to the concerned officers to fill up the vacant posts.

(d) Action will be taken to see that the work will not be held up ,

MATTER UNDER RULE 312

re.—Prevalance of acute Scarcity conditions in some parts of the State.

ಶ್ರೀ ಕೆ. ಹೆಚ್. ಹನುಮೇಗೌಡ.—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ೧/೩ ಭಾಗದಲ್ಲಿ ತಲೆ ದೋರಿರುವ ಕ್ಷಾಮದ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಲಿಕ್ಕೆ ಇಷ್ಟಪಡುತ್ತೇನೆ ಹಾಗೂ ಇದರ ಬಗೆ ವಿನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದರ ಬಗ್ಗೆ ಪೂರ್ಣ ವಿವರವನ್ನು ಕೊಡಬೇಕು ಎಂದು ಆವರ ಗಮನವನ್ನೂ ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ...—ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು.—ನಾವು ಇದನ್ನು ಕಳಿಸಿದಾಗ ತಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲ ಎಂದು ತಮ್ಮ ಆಫೀಸಿನಿಂದ ಉತ್ತರ ಬಂತು. ನಂತರ I had to contact the Development Ministry.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಕೊಟ್ಟಿಂಥ ನೋಟೀಸ್ ಜನರಲ್ಲಾಗಿದೆ. Seasonal condition, agriculture, drinking water ಎಲ್ಲಾ ಇದೆ. ನನ್ನ ಪತ್ತಿರ ಇದ್ದಂಥ ಮಾಹಿತಿಯನ್ನು ಒದಗಿಸಿಕೊಡುತ್ತೇನೆ. ಈಗ I have prepared a statement. So, I will reply. Even district-wise seasonal condition report, I have got. But, it only requires 40-45 minutes.

MR. SPEAKER.—Is it supplied to the Members ?

SRI M. MALLIKARAJUNA KHARGE.—Yes, we have supplied.

ಒಬ್ಬ ಸದಸ್ಯರು.—ಈಗ ನಮಗೆಲ್ಲಾ ಸಪ್ಲೈ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿನ್ನೆ ರೈಜ್ ಮಾಡಿದ್ದು, ಇವತ್ತು ಕೊಟ್ಟಿದ್ದೇವೆ ಮಾನ್ಯ ಅಧ್ಯಕ್ಷರೆ, ಈ ವಿಷಯ, ಈ ಸದನದಲ್ಲಿ ಅನೇಕ ಸಲ ಚರ್ಚೆಗೆ ಬಂದಿದೆ. ಮತ್ತು ಮೊನ್ನೆ ಸ್ಟಾರ್ಡ್ ಕೊಶ್ಚನ್‌ನಲ್ಲಿ ಶ್ರೀ ಆರ್ಮುಗಂ, ಶ್ರೀ ಹನುಮೇಗೌಡರು, ಶ್ರೀ ಪಿ. ಎನ್. ರೆಡ್ಡಿ ಮುಂತಾದ ಅನೇಕ ಸದಸ್ಯರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆಗ ಇದ್ದಂಥ ಸಮಯದಲ್ಲಿ ಉತ್ತರವನ್ನೂ ಕೂಡ ಕೊಟ್ಟಿದ್ದೇನೆ. ನಿಜವಾಗಲೂ ರಾಜ್ಯದ ಅನೇಕ ಕಡೆ ಪರಿಸ್ಥಿತಿ ಸ್ವಲ್ಪ ಗಂಭೀರವಾಗಿದೆ, ಇದು